**O.S. 114-18 PW : 2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 15.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ S R A, ವಕೀಲರಿಂದಃ**

2. ನಾನೇ ಮುಖ್ಯ ವಿಚಾರಣೆಗೆ ಮಾಹಿತಿ ಕೊಟ್ಟಿದ್ದೇನೆ. ಈ ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿದ್ದಾರೆಂದು ಮಾಹಿತಿ ಇದೆ. ವಾದಿ ನ್ಯಾಯಾಲಯದಲ್ಲಿ ಏನು ಸಾಕ್ಷಿ ನುಡಿದಿದ್ದಾನೆಂದು ತಿಳಿದುಕೊಂಡಿದ್ದೇನೆ. ವಾದ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ವಾದ ಪತ್ರವನ್ನು ತಯಾರು ಮಾಡಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನಾನು ಮಾಹಿತಿ ಕೊಡುವಾಗ ನನ್ನ ಅಕೌಂಟದಿಂದ ಹಣ ವರ್ಗಾವಣಗೊಂಡ ಬಗ್ಗೆ ಗೊತ್ತಿತ್ತು. ಆ ಪ್ರಕಾರ ನಾನು ವಕೀಲರಿಗೆ ಮಾಹಿತಿ ನೀಡಿದ್ದೇನೆ. ನನ್ನ ಹೇಳಿಕೆ ಪ್ರಕಾರ ವಕೀಲರು ಬರೆದಿದ್ದನ್ನು ಪರಿಶೀಲನೆ ಮಾಡಿದ್ದೇನೆ. ಚೆಕ್ ಮೂಲಕ ಹಣ ಕೊಟ್ಟಿದ್ದೇನೆಂದು ವಕೀಲರು ಬರೆದಿದ್ದು ನೋಡಿದ್ದೇನೆ. ವಾದ ಪತ್ರದಲ್ಲಿ ಅದರ ಬಗ್ಗೆ ವಿಷಯ ಇತ್ತು.

3. ಮಾತುಕತೆಗೆ ನಾನು, ಅರಮನೆಯವರು ಹಾಗೂ ಎಸ್ ಸಿ ಹಿರೇಮಠ ರವರು ಮೂರು ಜನ ಹೋಗಿದ್ದೆವು. ಮಾತುಕತೆ ಆಗಿದ್ದು, ಬರವಣಿಗೆ ಮೂಲಕ ಆಗಲಿಲ್ಲ. ಮಾತುಕತೆಯಾದ ಬಗ್ಗೆ ದಾಖಲೆ ಇಲ್ಲ ಆದರೆ ಹಣ ಕೊಟ್ಟ ಬಗ್ಗೆ ರಶೀದಿ ಕೊಟ್ಟಿದ್ದಾರೆ. 1 ಲಕ್ಷದ್ದು ಒಂದು ಹಾಗೂ ನಾಲ್ಕು ಲಕ್ಷದ್ದು ಒಂದು ರಶೀದಿ ಕೊಟ್ಟಿದ್ದಾರೆ. ರಶೀದಿ ಅರಮನೆ ರವರ ಬಳಿ ಕೊಟ್ಟಿದ್ದೆನು. ಅವರು ಎರಡು ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ. ಈ ಕೇಸ್ ಹಾಕಿದ ನಂತರ ಅರಮನೆ ರವರು 6 ವರ್ಷಗಳು ಜೀವಂತ ಇದ್ದರು. ನನ್ನ ಮಗ ಕೇಸ್ ಹಾಕಿದ್ದಾನೆ ರಶೀದಿ ಕೊಡಿ ಎಂದು ಅರಮನೆ ರವರಿಗೆ ಕೇಳಿದ್ದೇನೆ. ಮನೆಯಲ್ಲಿಟ್ಟಿದ್ದು ಪೇಂಟಿಂಗ ಮಾಡುವಾಗ ರಶೀದಿ ಎಲ್ಲಿಯೋ ಹೋಗಿದೆ ಎಂದು ಹೇಳಿದ್ದಾರೆ. ರಶೀದಿ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಕಳೆದಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನವೆಂಬರ 2011 ರಲ್ಲಿ 1 ಲಕ್ಷ ರೂ ಹಾಗೂ 4 ಲಕ್ಷ ರೂ. ಎರಡು ಚೆಕ್ ಗಳನ್ನು ಆರ್ ಜಿ ಹಿರೇಮಠ ರವರ ಬಳಿ ಕೊಟ್ಟಿದ್ದೆನು. ಇದೇ ಕಾರಣಕ್ಕೆ ಚೆಕ್ ಕೊಟ್ಟಿದ್ದೇನೆಂದು ನನ್ನ ಬಳಿ ದಾಖಲೆಗಳಿಲ್ಲ. ಆದರೆ ರಶೀದಿಯಲ್ಲಿ ಬರೆದಿದ್ದರು. ಮನೆ ಬಾಬತ್ತು ರಶೀದಿ ಕೊಟ್ಟಿದ್ದಾರೆಂದು ಶುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ವಯಸ್ಸು 84 ವರ್ಷ. ನನ್ನ ಅನುಭವದಲ್ಲಿ ಖರೀದಿ ವ್ಯವಹಾರವಾದರೆ ಸಂಚಗಾರ ಹಣ ಕೊಟ್ಟ ಬಗ್ಗೆ ಖರೀದಿ ಕರಾರು ಪತ್ರ ಮಾಡಿಕೊಳ್ಳುತ್ತಾರೆ ಅಂದರೆ ಸರಿ.

**O.S. 114-18 PW : 2**

ಮನೆ ಬಾಬತ್ತು ನಮ್ಮ ಹಾಗೂ ಪ್ರತಿವಾದಿಗಳ ನಡುವೆ ಯಾವುದೇ ಮಾತುಕತೆ ಆಗಿಲ್ಲ ಅಂದರೆ ಸರಿಯಲ್ಲ. 15 ಲಕ್ಷ ರೂ. ಗಳಿಗೆ ಪ್ರತಿವಾದಿಗಳು ಒಪ್ಪಿಕೊಂಡಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮನೆ ಬಾಬತ್ತು 15 ಲಕ್ಷ ರೂ. ಗಳಿಗೆ ವ್ಯವಹಾರ ಮುಗಿಯಿತು ಅದಕ್ಕೆ ಸಂಬಂಧಪಟ್ಟಂತೆ ನಾನು ಚೆಕ್ ಕೊಟ್ಟಿದ್ದೇನೆಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿ ಹಣ ಪಡೆದು ಖರೀದಿ ಪತ್ರವನ್ನು ಬರೆದುಕೊಡುತ್ತೇನೆಂದು ಹೇಳಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ರಶೀದಿ ಬಿಟ್ಟರೆ ಬೇರೆ ಕಾಗದ ಪತ್ರಗಳು ಇಲ್ಲ ಅಂದರೆ ಸರಿ. ನಾನು ಫ್ಲಾಟನ್ನು ಹೋಗಿ ನೋಡಿದ್ದೇನೆ. 12 – 13 ವರ್ಷಗಳ ಹಿಂದೆ ಫ್ಲಾಟನ್ನು ನೋಡಿದ್ದೇನೆ. ಈ ದಾವೆಯಲ್ಲಿ ಪ್ರತಿವಾದಿಗಳಾಗಿ ಶಿರೂರ, ಆರ್ ಜಿ ಹಿರೇಮಠ ಹಾಗೂ ಎಸಿ ಜಿ ಹಿರೇಮಠ ಹಾಗೂ ಅಸೋಶಿಯೇಟ್ಸ ರವರು ಸೇರಿ ಮಾಡಿರುತ್ತಾರೆ. ಮನೆ ಖರೀದಿ ಮಾಡಿದವರು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಅಂದರೆ ಸರಿ. 8 ನೇ ಪ್ರತಿವಾದಿ ಮಾಲಿಕತ್ವದಲ್ಲಿ ಈಗ ಮನೆ ಇದೆ ಅಂದರೆ ಸರಿ. ಖರೀದಿ ಪತ್ರ ಬರೆದುಕೊಡುವಂತೆ ನಾನೇ ಕೇಳುತ್ತಿದ್ದೆನು. ನಾನು ನೋಟಿಸು ಕೊಟ್ಟಿಲ್ಲ. ನಾನು ಕೊಟ್ಟ ಚೆಕ್ ಗೂ ಹಾಗೂ ಮೌಖಿಕ ಒಪ್ಪಂದಕ್ಕೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಮಗನ ಮೂಲಕ ಸುಳ್ಳು ಕೇಸ ಹಾಕಿಸಿದ್ದೇನೆ ಅಂದರೆ ಸರಿಯಲ್ಲ. ನನ್ನ ಬಳಿ ಯಾವುದೇ ಕಾಗದ ಪತ್ರ ಇಲ್ಲದಿದ್ದರೂ ಮಗನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.